# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ** | : | 2469 |
| **ಸದಸ್ಯರ ಹೆಸರು** | : | ಶ್ರೀ ಎನ್. ರವಿಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 23.03.2022. |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ | <u>**ಪ್ರಶ್ನೆಗಳು**</u> | <u>**ಉತ್ತರಗಳು**</u> |
|---|---|---|
| ಅ) | ರಾಜ್ಯದಲ್ಲಿ ಎಷ್ಟು ನದಿಗಳಲ್ಲಿ ಒಳನಾಡು ಜಲಸಾರಿಗೆ ವ್ಯವಸ್ಥೆಯಿದೆ; (ನದಿಗಳ ಹೆಸರಿನೊಂದಿಗೆ ವಿವರ ನೀಡುವುದು) | • ರಾಜ್ಯದ 05 ನದಿಗಳಲ್ಲಿ ಒಳನಾಡು ಜಲಸಾರಿಗೆ ವ್ಯವಸ್ಥೆ ಇದೆ. ವಿವರಗಳು ಕೆಳಗಿನಂತಿವೆ.<br><br>• ಹೊನ್ನಾವರದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಮಂಜುಗುಣಿ - ಗಂಗಾವಳಿ ನದಿ ದಾಟಲು 01, ಹಂಗಾರಕಟ್ಟಾ – ಕೋಡಿಬೆಂಗ್ರೆ 01 ಮಿನಿ ಎಲ್.ಸಿ.ಟಿ ತದಡಿ-ಅಘನಾಶಿನಿ 01 ಮಿನಿ ಎಲ್.ಸಿ.ಟಿ ಒದಗಿಸಲಾಗಿದೆ.<br><br>• ಬಾಗಲಕೋಟೆ ವಲಯಕ್ಕೆ ಸಂಬಂಧಪಟ್ಟಂತೆ ಕೃಷ್ಣಾ, ಮಲಪ್ರಭಾ, ಘಟಪ್ರಭಾ ನದಿಗಳಲ್ಲಿ ಕಡವುಗಳ ಸೇವೆಗಳನ್ನು ಒದಗಿಸಲಾಗಿದೆ.<br><br>• ಹುಬ್ಬಳ್ಳಿ ವಲಯಕ್ಕೆ ಸಂಬಂಧಪಟ್ಟಂತೆ ತುಂಗಭದ್ರಾ ನದಿ ಹಾಗೂ ಇತರೆ ಕಡವು ಸೇವೆಗಳನ್ನು ಒದಗಿಸಲಾಗಿದೆ.<br><br>• ಉಳಿದಂತೆ ಶಿವಮೊಗ್ಗ ವಲಯಕ್ಕೆ ಸಂಬಂಧಪಟ್ಟಂತೆ ಶರಾವತಿ ನದಿಯ ಹಿನ್ನೀರು ಪ್ರದೇಶದಲ್ಲಿ 4 ಎಲ್.ಸಿ.ಟಿ ಗಳನ್ನು ನಡೆಸಲಾಗುತ್ತಿದೆ. |

| | | |
|---|---|---|
| ಆ) | ಸರ್ಕಾರವು ಒಳನಾಡು ಜಲಸಾರಿಗೆ ವ್ಯವಸ್ಥೆಯ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು ಯಾವುವು; (ವಿವರ ನೀಡುವುದು) | • ಸರ್ಕಾರವು ರಾಜ್ಯದ 4 ಒಳನಾಡು ಜಲಸಾರಿಗೆ ಮಾರ್ಗಗಳನ್ನು ಕೇಂದ್ರ ಸರ್ಕಾರದ ಸಾಗರಮಾಲಾ ಯೋಜನೆ ಹಾಗೂ ಇನ್‌ಲ್ಯಾಂಡ್ ವಾಟರ್ ಅಥಾರಿಟಿ ಆಫ್ ಇಂಡಿಯಾ (IWAI) ಇವರ ಸಹಯೋಗದಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ಜರುಗಿಸಲಾಗುತ್ತಿದೆ. ವಿವರಗಳು ಈ ಕೆಳಗಿನಂತಿವೆ.<br><br>1. ಕಾಳಿ (NW-52) ನದಿಯಲ್ಲಿ ಪ್ರವಾಸೋಧ್ಯಮ ಹಾಗೂ ಇತರೆ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ತೇಲುವಜೆಟ್ಟಿ ನಿರ್ಮಾಣ, ಜಲಸಾರಿಗೆ ಮಾರ್ಗ ಅಭಿವೃದ್ಧಿ ಹಾಗೂ ಇತರೆ ಪೂರಕ ಮೂಲಭೂತ ಸೌಕರ್ಯಗಳ ನಿರ್ಮಾಣ.<br><br>2. ಗುರುಪುರ (NW-43) ನದಿಯಲ್ಲಿ ಪ್ರವಾಸೋಧ್ಯಮ ಹಾಗೂ ಪ್ರಯಾಣಿಕರ ಪ್ರಯಾಣಕ್ಕಾಗಿ ಟರ್ಮಿನಲ್ ನಿರ್ಮಾಣ, ರೋ-ರೋ ಜೆಟ್ಟಿಗಳ ನಿರ್ಮಾಣ ಹಾಗೂ ಜಲಸಾರಿಗೆ ಮಾರ್ಗ ಅಭಿವೃದ್ಧಿ ಹಾಗೂ ಇತರೆ ಪೂರಕ ಮೂಲಭೂತ ಸೌಕರ್ಯಗಳ ನಿರ್ಮಾಣ.<br><br>3. ಘಟಪ್ರಭಾ ನದಿಯಲ್ಲಿ ಆಲಮಟ್ಟಿಯಿಂದ ಬಾಗಲಕೋಟೆಗೆ ಸಂಚರಿಸಲು ಪ್ರವಾಸೋಧ್ಯಮ ಹಾಗೂ ಇತರೆ ಚಟುವಟಿಕೆಗಳಿಗೆ ತೇಲುವಜೆಟ್ಟಿ ನಿರ್ಮಾಣ, ಜಲಸಾರಿಗೆ ಮಾರ್ಗ ಅಭಿವೃದ್ಧಿ ಹಾಗೂ ಇತರೆ ಪೂರಕ ಮೂಲಭೂತ ಸೌಕರ್ಯಗಳ ನಿರ್ಮಾಣ.<br><br>4. ಸುವರ್ಣ ನದಿಯಲ್ಲಿ ಮಣಿಪಾಲಿನಿಂದ ಹಂಗಾರಕಟ್ಟವರೆಗೆ ಜಲಮಾರ್ಗಗಳ ತೇಲುವ ಜೆಟ್ಟಿ ನಿರ್ಮಾಣ, ಟರ್ಮಿನಲ್ ನಿರ್ಮಾಣ ಮತ್ತು ಇತರೆ ಪೂರಕ ಮೂಲಭೂತ ಸೌಕರ್ಯಗಳ ನಿರ್ಮಾಣ. |
| ಇ) | ಈ ಒಳನಾಡು ಜಲಸಾರಿಗೆಯಿಂದ ಎಷ್ಟು ಮೀನುಗಾರರ ಕುಟುಂಬಗಳು ಉದ್ಯೋಗವನ್ನು ಹೊಂದಿವೆ; ಈ ಮೀನುಗಾರರ ಕುಟುಂಬಗಳ ಆರ್ಥಿಕ ಸಶಕ್ತೀಕರಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು? | • ಈ ಒಳನಾಡು ಜಲಸಾರಿಗೆ ಸೇವೆಯಿಂದ ಮೀನುಗಾರರ ಕುಟುಂಬಗಳು ಒಳಗೊಂಡಂತೆ ಅಂದಾಜು ಸ್ಥಳೀಯ 70 ಕುಟುಂಬಗಳಿಗೆ ಉದ್ಯೋಗ ಸೃಷ್ಟಿಯಾಗಿರುತ್ತದೆ.<br><br>• ಮೀನುಗಾರರ ಕುಟುಂಬಗಳ ಆರ್ಥಿಕ ಸಶಕ್ತೀಕರಣದ ಬಗ್ಗೆ ಮೀನುಗಾರಿಕಾ ಇಲಾಖೆಯಿಂದ ಕ್ರಮ ಜರುಗಿಸಲಾಗುತ್ತಿದೆ. |

IDD 56 PSP 2022 (E-726639)

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು